## ಮಾತು-ಕತೆ

'ಅಗಸ್ತ್ಯ', 'ಕಡಲ ಹಾದಿ', 'ಸಿಲೋನ್ ಸುಶೀಲ' (ಕಥಾಸಂಕಲನಗಳು), 'ನೂರು ಸ್ವರ', 'ವನಜಮ್ಮನ ಸೀಟು' (ಕಾದಂಬರಿಗಳು), 'ರಾಕಿ ಪರ್ವತಗಳ ನಡುವೆ ಕ್ಯಾಬರೆ', 'ಇನ್ನೂ ಎಲ್ಲಿಗೋಟ' (ಪ್ರವಾಸ ಕಥನಗಳು), 'ಮುಂಬೈ ಡೈರಿ' (ಅಂಕಣ), 'ಅವಳ ಸೂರ್ಯ' (ಕೆನಡಿಯನ್ ಕತೆಗಳ ಅನುವಾದ), 'ಬಿಸಿಲು ಕೋಲು' (ಸಿನಿ ಛಾಯಾಗ್ರಾಹಕ ವಿ.ಕೆ. ಮೂರ್ತಿಯವರ ಜೀವನಚರಿತ್ರೆ), 'ದಲೈ ಲಾಮ' (ಸಂಕ್ಷಿಪ್ತ ಜೀವನಚರಿತ್ರೆ), 'ಉಮಾ ರಾವ್ ಕತೆಗಳು' (ಸಮಗ್ರ ಕಥಾಸಂಕಲನ) ಇವು ಪ್ರಕಟಿತ ಕೃತಿಗಳು. ಇವರ ಕತೆಗಳು ಇಂಗ್ಲಿಷ್, ಹಿಂದಿ, ತಮಿಳು, ತೆಲುಗು, ಪಂಜಾಬಿ ಭಾಷೆಗಳಿಗೆ ಅನುವಾದಗೊಂಡಿವೆ. ಉಮಾ ರಾವ್ ಕೆನಡಾದ ಬ್ರಿಟಿಷ್ ಕೊಲಂಬಿಯಾ ವಿಶ್ವವಿದ್ಯಾಲಯದ ಆಂಡ್ರೂಸ್ ಫೆಲೋಶಿಪ್ ವಿಜೇತರು. ಇವರ 'ಬಿಸಿಲು ಕೋಲು' ಕೃತಿಗೆ 2006ರ ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಮಲ್ಲಿಕಾ ಪ್ರಶಸ್ತಿ ಬಂದಿವೆ. 'ಸಿಲೋನ್ ಸುಶೀಲ' ಕಥಾಸಂಕಲನಕ್ಕೆ 2010ರ ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ಎಚ್.ವಿ. ಸಾವಿತ್ರಮ್ಮ ಜನ್ಮಶತಾಬ್ದಿ ಪ್ರಶಸ್ತಿ, 'ಅಗಸ್ತ್ಯ', 'ಮುಂಬೈ ಡೈರಿ', 'ನೂರು ಸ್ವರ' ಕೃತಿಗಳಿಗೆ ಕನ್ನಡ ಸಾಹಿತ್ಯ ಪರಿಷತ್ ದತ್ತಿನಿಧಿ ಬಹುಮಾನಗಳು ಲಭಿಸಿವೆ. 'ನೂರು ಸ್ವರ' ಕಾದಂಬರಿಗೆ ಗೊರೂರು ಪ್ರಶಸ್ತಿ ಕೂಡ ಸಂದಿದೆ.

◆ **ಚಿಕ್ಕಂದಿನಲ್ಲಿ ಮನೆಯ ವಾತಾವರಣ ಹೇಗಿತ್ತು? ಓದುವ ಅಭಿರುಚಿ ಹುಟ್ಟಿದ್ದು ಹೇಗೆ?**

ನಮ್ಮ ಮನೆಯಲ್ಲಿ ಓದುವ ಅಭ್ಯಾಸ ಎಲ್ಲರಿಗೂ ಇತ್ತು. ನಮ್ಮ ತಂದೆ ತಾಯಿ, ಅಜ್ಜಿ ಎಲ್ಲರೂ ಓದೋರು. ಮನೆಗೆ ಎರಡೆರಡು ಪತ್ರಿಕೆ ಬರೋದು, ಜೊತೆಗೆ, ಕನ್ನಡ, ಇಂಗ್ಲಿಷ್ ಎರಡೂ ಭಾಷೆಗಳ ಬಹಳ ಒಳ್ಳೆಯ ಪುಸ್ತಕಗಳ ಸಂಗ್ರಹ ಇತ್ತು.

ನಮ್ಮ ತಂದೆ ಡಾಕ್ಟರ್. ಅವರಿಗೆ ಓದೋದು ಅಂದ್ರೆ ಬಹಳ ಇಷ್ಟ. ಅವರು ಇಂಗ್ಲಿಷ್ ಪುಸ್ತಕ ಹೆಚ್ಚು ಓದೋರು. ತುಮಕೂರಲ್ಲಿ ಆಗಿನ ಕಾಲದಲ್ಲಿ ಅಷ್ಟೊಂದು ಪುಸ್ತಕಗಳು ಸಿಗುತ್ತಿದ್ದವಾ ಅಂತ ಈಗ ಆಶ್ಚರ್ಯ ಆಗುತ್ತೆ. ಎಲ್ಲ ದೊಡ್ಡ ಬರಹಗಾರರ ಇಂಗ್ಲಿಷ್, ಕನ್ನಡ ಪುಸ್ತಕಗಳ ಸಂಗ್ರಹ ನಮ್ಮ ಮನೆಯಲ್ಲಿತ್ತು.

ನಮ್ಮಮ್ಮ ಬಿಎಸ್‌ಸಿ ಆನರ್ಸ್ ಫಿಸಿಕ್ಸ್ ಮಾಡಿದ್ದರು. ತುಂಬ ಬುದ್ಧಿವಂತೆ. ಅವರಿಗೆ ಸೋಶಿಯಲ್ ವರ್ಕ್ ಕಡೆ ಆಸಕ್ತಿ. ಅಲ್ಲೊಂದು ಮಹಿಳಾ ಸಮಾಜ ನಡೆಸುತ್ತಿದ್ದರು. ಅಲ್ಲಿ ನರ್ಸರಿ ಶಾಲೆ, ವಯಸ್ಕರ ಶಿಕ್ಷಣ ಶಾಲೆ ನಡೆಸೋರು. ಆಮೇಲೆ ಸ್ವಲ್ಪ ವಯಸ್ಸಾದವರಿಗೆ ಕೆಲಸ ಸಿಗೋಕೆ ಉಪಯೋಗ ಆಗಲಿ ಅಂತ ಎಸ್‌ಎಸ್‌ಎಲ್‌ಸಿ ಕಂಡೆನ್ಸ್ಡ್ ಕೋರ್ಸ್ ಮಾಡೋರು. ಅಲ್ಲಿ ಅಮ್ಮ ತುಂಬಾ ಕೆಲಸ ಮಾಡೋರು. ಅಮ್ಮ ಕನ್ನಡ ಪುಸ್ತಕ ಜಾಸ್ತಿ ಓದೋರು.

ನಮ್ಮ ತಂದೆನೇ ಪುಸ್ತಕ ಓದಲು ಶುರುಮಾಡಿಸಿದರು ಅಂತ ಹೇಳಬಹುದು. ಏಳೆಂಟು ವರ್ಷದವಳಿದ್ದಾಗಲೇ ಪುಸ್ತಕ ಓದೋಕೆ ಶುರುಮಾಡಿದ್ದೆ. ಹದಿಮೂರು ಹದಿನಾಲ್ಕನೇ ವಯಸ್ಸಿಗೆ ಬರೋ ಹೊತ್ತಿಗೆ ಇಂಗ್ಲಿಷ್ ಅರ್ಥವಾಗೋಕೆ ಶುರುವಾದ ಮೇಲೆ ಸರಳವಾದ ಇಂಗ್ಲಿಷ್ ಪುಸ್ತಕಗಳನ್ನು ಓದಿಸೋಕೆ ಶುರುಮಾಡಿದರು.

ಒಂದು ಸಲ ಓದಿನ ರುಚಿ ಹತ್ತಿದ ಮೇಲೆ ದೊಡ್ಡವರಾದ ಮೇಲೂ ಅದು ಹಾಗೆಯೇ ಮುಂದುವರೆಯುತ್ತಲ್ಲ. ಊರಲ್ಲಿ ಪಬ್ಲಿಕ್ ಲೈಬ್ರರಿ ಇತ್ತು. ದೊಡ್ಡವರಾದ ಮೇಲೆ ಅಲ್ಲಿ